ಸಾಕ್ಷಿಯನ್ನು ದಿ: 18.06.2025 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಡಿ.ಡಬ್ಲ್ಯೂ-1

**ಮುಂದುವರೆದ ಪಾಟೀಸವಾಲುಃ- ವಾದಿಗಳ ಪರ ವಕೀಲರಿಂದ:-**

1. ನಿಡಿ.2 ನೋಟರೈಸ್ಡ್ ವಂಶವೃಕ್ಷದಲ್ಲಿ ಚಿಕ್ಕಣ್ಣಚಾರಿಯ ಮಗ ಮಹಾಲಿಂಗಚಾರಿ ಎಂದು ಬರೆಸಿರುತ್ತೇನೆಂದರೆ ಸರಿ. ಸದರಿ ಚಿಕ್ಕಣ್ಣಚಾರಿಯವರ ಹೆಂಡತಿಯ ಹೆಸರು ಯಶೋಧಮ್ಮ ಟಿ. ಸದರಿ ಯಶೋಧಮ್ಮರವರ ಹೆಸರನ್ನು ವಂಶವೃಕ್ಷದಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ಗುರಪ್ಪಚಾರಿ ಉಃ ಗುರುವಾಚಾರಿಯವರ ಮಗ ಲಿಂಗಣ್ಣಚಾರಿ ಎಂದು ಬರೆಸಿದ್ದೇನೆಂದರೆ ಸರಿ. ಸದರಿ ಲಿಂಗಣ್ಣಚಾರಿರವರ ಮಕ್ಕಳ ಹೆಸರು ಭಾಗ್ಯ, ರಾಚಪ್ಪಾಜಿ, ಸಿದ್ದಪ್ಪ ಹಾಗೂ ತೀರ್ಥಚಾರಿ ಎಂದು ಬರೆಸಿದ್ದೇನೆಂದರೆ ಸರಿ. ಸದರಿ ರಾಚಪ್ಪಾಜಿ ಹಾಗೂ ಪ್ರೇಮರವರ ಮಕ್ಕಳು ಗುರುಮೂರ್ತಿ, ಗುರುಸ್ವಾಮಿ, ಹೇಮ ಮತ್ತು ವಿನಯ್ ಎಂದು ನಿಡಿ.2 ರಲ್ಲಿ ಬರೆಸಿದ್ದೇನೆಂದರೆ ಸರಿ.

2. ರಾಚಪ್ಪರವರು ಯಶೋಧಮ್ಮರವರ ಸ್ವಂತ ಮಗನಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ 4 ನೇ ಕಂಡಿಕೆಯಲ್ಲಿ ಹೇಳಿರುವಂತೆ 3 ನೇ ಮತ್ತು 4 ನೇ ಪ್ರತಿವಾದಿಗಳು ಯಶೋಧಮ್ಮರವರ ಸ್ವಂತ ಮೊಮ್ಮಕ್ಕಳಲ್ಲ ಎಂದರೆ ಸರಿ. ಸದರಿ ವಿಚಾರವನ್ನು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿಲ್ಲ. ನನ್ನ ತಾಯಿಯಾದ ದೊಡ್ಡತಾಯಮ್ಮ ಉಃ ಚಿಕ್ಕತಾಯಮ್ಮ ಚಿಕ್ಕಣ್ಣಚಾರಿಯವರ ಮಗಳು ಎಂದರೆ ಸರಿ. ನನ್ನ ತಂದೆಯ ಹೆಸರು ಸಿದ್ದಚಾರಿ ಎಂದರೆ ಸರಿ. ನಿಡಿ.2 ವಂಶವೃಕ್ಷದಲ್ಲಿ ನನ್ನ ತಂದೆಯ ತಂದೆ ಹೆಸರು ತೋರಿಸಿಲ್ಲ ಎಂದರೆ ಸರಿ.

3. ಮಹಾಲಿಂಗಾಚಾರಿ ನನ್ನ ತಾಯಿಯ ತಮ್ಮ ಎಂದರೆ ಸರಿ. ಗುರಪ್ಪಚಾರಿ ಉಃ ಗುರುಸಿದ್ದಚಾರಿರವರು ನನಗೆ ನೇರ ಸಂಬಂಧವಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಸಿದ್ದಚಾರಿಯವರ ತಂದೆಯ ಹೆಸರು ಕೂನನಕೊಪ್ಪಲು ರಾಚಾಚಾರಿ ಎಂದರೆ ಸರಿ. ನನ್ನ ಪ್ರತಿವಾದ ಪತ್ರದ 14 ನೇ ಕಂಡಿಕೆಯಲ್ಲಿ ನನ್ನ ತಂದೆಯ ತಂದೆ ಹೆಸರು ರಾಚಟ್ಟಚಾರಿ ಎಂದು ಕಾಣಿಸಲಾಗಿದೆ ಎಂದರೆ ಸರಿ.

4. ಸರ್ವೆ ನಂ.79 ರ ಒಟ್ಟು ವಿಸ್ತೀರ್ಣ 03 ಎಕರೆ 07 ಗುಂಟೆ ಜಮೀನಿನಲ್ಲಿ ವಾದಿಯರ ತಾತನಾದ ರಾಚಟ್ಟಚಾರಿ ರಾಚಯ್ಯರವರಿಗೆ 1 ಎಕರೆ 19 ಗುಂಟೆ ಜಮೀನು ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳ ಒಟ್ಟು ವಿಸ್ತೀರ್ಣ 01 ಎಕರೆ 19 ಗುಂಟೆ ಎಂದರೆ ಸರಿ. ದಾವಾ ಆಸ್ತಿಗಳು ವಾದಿಯರ ತಾತನ ಆಸ್ತಿಗಳು ಎಂದು ದಾವೆ ಸಲ್ಲಿಸಿದ್ದಾರೆಂದರೆ ಸರಿ. ನಿಪಿ.10 ರ ಪ್ರಕಾರ ವಾದಿಯರ ತಂದೆಯ ಹೆಸರು ಪುಟ್ಟಸ್ವಾಮಾಚಾರಿ ಬಿನ್ ರಾಚಟ್ಟಚಾರಿ ಎಂದರೆ ಸರಿಯಲ್ಲ.

ನಿಪಿ.11 ಮತ್ತು 12 ರಲ್ಲಿಯೂ ಸಹ ರಾಚಟ್ಟಚಾರಿಯವರ ಮಗ ಪುಟ್ಟಸ್ವಾಮಾಚಾರಿ ಎಂದು ಕಾಣಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

5. ವಾದಿಯರ ತಂದೆ ಪುಟ್ಟಸ್ವಾಮಾಚಾರಿ ಗುಳಗಟ್ಟ ಗ್ರಾಮದಲ್ಲಿ ವಾಸವಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಪಿ.16 ರಲ್ಲಿ ಪುಟ್ಟಸ್ವಾಮಾಚಾರಿ ಬಿನ್ ಗುಳಗಟ್ಟ ಗ್ರಾಮ ಎಂದು ಕಾಣಿಸಲಾಗಿದೆ ಎಂದರೆ ಸರಿಯಲ್ಲ. ಗುಳಗಟ್ಟ ಗ್ರಾಮದಲ್ಲಿ ಪುಟ್ಟಸ್ವಾಮಾಚಾರಿಯವರಿಗೆ ನಿಪಿ.17 ರಂತೆ ಆಸ್ತಿ ಮಂಜೂರು ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ವಾದಿಯರು ಸಲ್ಲಿಸಿದ ಎಲ್ಲಾ ದಾಖಲೆಗಳಲ್ಲಿ ಪುಟ್ಟಸ್ವಾಮಾಚಾರಿ ತಂದೆ ರಾಚಟ್ಟಚಾರಿ ಎಂದು ಕಾಣಿಸಲಾಗಿದೆ ಎಂದರೆ ಸರಿಯಲ್ಲ. ನಿಡಿ.3 ಕ್ರಯಪತ್ರದಲ್ಲಿ ಸಿದ್ದಚಾರಿ ಬಿನ್ ರಾಚಾಚಾರಿ ಎಂದು ಕಾಣಿಸಲಾಗಿದೆ ಆದರೆ ರಾಚಾಚಾರಿಯವರ ತಂದೆಯ ಹೆಸರು ಕಾಣಿಸಿಲ್ಲ ಎಂದರೆ ಸರಿ. ನನ್ನ ಪ್ರತಿವಾದ ಪತ್ರದಲ್ಲಿ ನನ್ನ ತಂದೆಯ ತಂದೆ ಹೆಸರು ರಾಚಟ್ಟಚಾರಿ ಎಂದು ಹೇಳಿರುತ್ತೇನೆ. ಆದರೆ ನಿಡಿ.3 ರಲ್ಲಿ ಸಿದ್ದಚಾರಿ ಬಿನ್ ರಾಚಾಚಾರಿ ಎಂದು ಕಾಣಿಸಲಾಗಿದೆ ಎಂದರೆ ಸರಿಯಲ್ಲ. ಆದ್ದರಿಂದ ನಮಗೂ ನಿಡಿ.3 ಕ್ರಯಪತ್ರಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

6. ನಿಡಿ.3 ರಲ್ಲಿ ಕಾಣಿಸಿರುವ ಸಿದ್ದಚಾರಿ ಬಿನ್ ರಾಚಾಚಾರಿ ವಾದಿಯರ ತಂದೆ ಎಂದರೆ ಸರಿಯಲ್ಲ. ವಾದಿಯರ ತಂದೆಯರ ಹೆಸರು ಪುಟ್ಟಸ್ವಾಮಾಚಾರಿ ಎಂದರೆ ಸಾಕ್ಷಿಯು ಸಿದ್ದಚಾರಿ ಎಂದು ನುಡಿಯುತ್ತಾರೆ. ನಿಡಿ.3 ಕ್ರಯಪತ್ರವನ್ನು ಸೃಷ್ಠಿಸಲಾಗಿದೆ ಎಂದರೆ ಸರಿಯಲ್ಲ. ಆರ್ ಸಿದ್ದಚಾರಿರವರು ರಾಚಪ್ಪರವರ ಮಗ ಎಂದು ತೋರಿಸಲು ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿಯು ನನಗೆ ಕ್ರಯ ಪತ್ರದ ಬಗ್ಗೆ ಗೊತ್ತು ಎಂದು ನುಡಿಯುತ್ತಾರೆ.

7. ನಿಡಿ.2 ರಲ್ಲಿ ಕಾಣಿಸಿರುವ ವಂಶವೃಕ್ಷವನ್ನು ತೋರಿಸಲು ಯಾವುದೇ ಸರ್ಕಾರಿ ದಾಖಲೆ ಹಾಜರುಪಡಿಸಿಲ್ಲ. ಆರ್ ಸಿದ್ದಚಾರಿ ಯಾವಾಗ ತೀರಿಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು**.

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ